ಒ.ಎಸ್.ನಂಬ್ರಃ 68/2024
ಪಿ.ಡಬ್ಲ್ಯೂ ಃ 1

ದಿನಾಂಕಃ 09-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರಿದ ಪಾಟೀ ಸವಾಲು ಃ **4 ನೇ** ಪ್ರತಿವಾದಿ ಪರ ಶ್ರೀ ಸಿ ಎಸ್ ಹೆಚ್ ವಕೀಲರಿಂದ

**9.** ನನ್ನ ವಿರುದ್ಧ ಉಮ್ಮಕ್ಕಿ ಗ್ರಾಮದ ಸಾರ್ವಜನಿಕರು ಬಿ ಶೆಡ್ಯೂಲ್ ದಾರಿಗೆ ಸಂಬಂದಪಟ್ಟಂತೆ ಎಂದು ಪಂಚಾಯತಿಗೆ ದೂರು ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅಲ್ಲಿ ದಾರಿ ಇರುವುದಿಲ್ಲ, ಯಾವಾಗ ದೂರು ಸಲ್ಲಿಸಿರುತ್ತಾರೆ ಎಂದು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪಟ್ಟಣ ಪಂಚಾಯತಿಯವರು ನನಗೆ ನೋಟೀಸು ಕೊಟ್ಟಿರುತ್ತಾರೆ, ಆದರೆ ಯಾವಾಗ ಎಂದು ಮರೆತು ಹೋಗಿರುತ್ತದೆ. ಆ ನೋಟೀಸಿಗೆ ಯಾವ ದಿನಾಂಕ ಉತ್ತರ ಕೊಟ್ಟಿರುತ್ತೇನೆ ಎಂದು ಕಳೆದ ಬಾರಿ ಹೇಳಿರುತ್ತೇನೆ, ಸಾಕ್ಷಿ ಈಗ ಮರೆತು ಹೋಗಿರುತ್ತದೆ ಎಂದು ನುಡಿಯುತ್ತಾರೆ. ಆ ನೋಟೀಸು ಹೊರತುಪಡಿಸಿ ಪಟ್ಟಣ ಪಂಚಾಯತಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದರೆ ಸಾಕ್ಷಿ ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

10. ತಾನು ಪಟ್ಟಣ ಪಂಚಾತಿಯವರ ವಿರುದ್ಧ ದಾವಾ ಸಲ್ಲಿಸಲು ಆ ನೋಟೀಸು ಕಾರಣವಲ್ಲವೇ ಎಂಬ ಪ್ರಶ್ನೆಗೆ ಸಾಕ್ಷಿ ನೋಟೀಸಲ್ಲ, ಪದೇ ಪದೇ ಗಲಾಟೆ ಮಾಡುವುದಲ್ಲದೆ, ರಸ್ತೆ ಮಾಡಲು ಪ್ರಯತ್ನಿಸಿರುತ್ತಾರೆ ಎಂದು ನುಡಿಯುತ್ತಾರೆ. ದಿನಾಂಕ 20-07-2013 ರಲ್ಲಿ ಪಟ್ಟಣ ಪಂಚಾಯತಿಯವರು ನೀಡಿದ ನೋಟೀಸಿನ ಪ್ರೇರಣೆ ಮೇರೆಗೆ ದಾವಾ ದಾಖಲಿಸಿದ್ದು ಎಂಬ ಪ್ರಶ್ನೆಗೆ ನೋಟೀಸು ಸೇರಿಸಿ ಬೇರೆ ಬೇರೆಯವರೆಲ್ಲ ಸ್ಥಳಕ್ಕೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂಬ್ರ 174/8 ರ ದಾವಾ ಎ ಶೆಡ್ಯೂಲ್ ಸ್ವತ್ತಿನ ಪಶ್ಚಿಮಕ್ಕೆ ಪರಂಬೋಕು ತೋಡು ಇರುತ್ತದೆ. ಪರಂಬೋಕು ತೋಡಿನ ನಂತರ ಪರಂಬೋಕು ಓಣಿ ಇದೆಯಾ ಎಂದರೆ ಸಾಕ್ಷಿ ನೀರು ತೋಡು ಇರುತ್ತದೆ ಎಂದು ನುಡಿಯುತ್ತಾರೆ. ಆ ನಂತರ ಪಶ್ಚಿಮಕ್ಕೆ ದಾವಾ ಬಿ ಶೆಡ್ಯೂಲ್ ಬರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಡಿಕ್ಲರೇಷನ್ ನಲ್ಲಿ ನಮ್ಮ ಪಟ್ಟ ಜಾಗದಲ್ಲಿ ಕಟ್ ಆಗಿರುತ್ತದೆ ಎಂದು ನುಡಿಯುತ್ತಾರೆ.

11. ಪರಂಬೋಕು ತೋಡಿನ ಸರ್ಬೆ ನಂಬ್ರ 174/6. 174/6 ಸಂಪೂರ್ಣ ಸರ್ವೆ ನಂಬ್ರ ಎಂದರೆ ಸರಿ. ಈ ನ್ಯಾಯಾಲಯದ ಮೂಲ ದಾವೆ ಸಂ.356/1995 ರಂತೆ ನನ್ನ ವಿರುದ್ಧ ಇಂದಿಗೂ ಊರ್ಜಿತವಿರುವ ಶಾಶ್ವತ ನಿರ್ಬಂಧಕಾಜ್ಞೆಯಂತೆ ನನಗೆ ದಾವಾ ಬಿ ಶೆಡ್ಯೂಲ್ ಸ್ವತ್ತಿಗೆ ಸಂಬಂದಿಸಿದಂತೆ ದಾವೆ ದಾಖಲಿಸಲು ಯಾವುದೇ ವಾದ ಕಾರಣ ಇರುವುದಿಲ್ಲ ಎಂದರೆ ಸಾಕ್ಷಿ ಕಾರಣ ಇದ್ದುದಕ್ಕೆ ನಾವು ಹಾಕಿರುತ್ತೇವೆ ಎಂದು ನ್ಯಾಯಾಲಯಕ್ಕೆ ಕೈ ತೋರಿಸಿ ನುಡಿದಿರುತ್ತಾರೆ.

12. ದಾವಾ ದಾಖಲಿಸಲು ನನಗೆ ಯಾವುದೇ ಕಾನೂನು ಬದ್ಧವಾದ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 4 ರವರು ಎ ಶೆಡ್ಯೂಲ್ ಸರ್ವೆ ನಂಬ್ರ 174/8 ರ ಸ್ವತ್ತಿಗೆ ಯಾವುದೇ ರೀತಿ ತೊಂದರೆ ಮಾಡಿರುವುದಿಲ್ಲ ಎಂದರೆ ಸಾಕ್ಷಿ ಉತ್ತರಿಸಿರುವುದಿಲ್ಲ. ದಾವಾ ವ್ಯಾಜ್ಯ ಕಾರಣ ಇಲ್ಲದೇ ಇರುವುದರಿಂದ ದಾವೆಯನ್ನು ವಜಾ ಮಾಡಿದರೆ ನನಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದರೆ ಸರಿಯಲ್ಲ.

ಪಾಟೀ ಸವಾಲು - **1** ರಿಂದ **3** ನೇ ಪ್ರತಿವಾದಿ ಪರ ಸಹಾಯಕ ಸರಕಾರ ಅಭಿಯೋಜಕರಿಂದಃ

13. ಬಿ ಶೆಡ್ಯೂಲ್ ಸ್ವತ್ತು ಕಾಗದ ಪತ್ರ ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿ ಅದು ನಮ್ಮ ಕುಮ್ಕಿ ಹಕ್ಕು, ಆರ್ ಟಿ ಸಿಯಲ್ಲಿ ಸರಕಾರಿ ಸ್ಥಳ ಎಂದು ತೋರಿಸುತ್ತದೆ ಎಂದರೆ ಸರಿ. ಬಿ ಶೆಡ್ಯೂಲ್ ಸ್ವತ್ತು ಸರಕಾರಿ ಜಾಗ ಎಂದು ಗೊತ್ತಿದ್ದರೂ ಸಹ ಎ ಶೆಡ್ಯೂಲ್ ಗೆ ಸಂಬಂದಿಸಿದಂತೆ ಖದೀಂ ಲ್ಯಾಂಡ್ ಎಂದು ಹೇಳಿ ಯಾವುದೇ ವ್ಯಾಜ್ಯ ಕಾರಣ ಇಲ್ಲದೇ ಇದ್ದರೂ ಸಹ 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಮೊದಲು ನನ್ನ ತಂದೆ ನೋಡಿಕೊಳ್ಳುತ್ತಿದ್ದರು, ನಂತರ ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ.

14. 1 ರಿಂದ 3 ನೇ ಪ್ರತಿವಾದಿ ಎ ಶೆಡಾಲ್ ಸ್ವತ್ತಿಗೆ ಯಾವುದೇ ತೊಂದರೆ ಕೊಡದೇ ಇದ್ದರೂ ಸಹ ಬಿ ಶೆಡ್ಯೂಲ್ ಸರಕಾರಿ ಜಾಗವನ್ನು ಕಬಳಿಸಬೇಕು ಎಂಬ ಕಾರಣದಿಂದ ಅವರ ವಿರುದ್ಧ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ, ಸಾಕ್ಷಿ ಅವರು ತೊಂದರೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಬಿ ಶೆಡ್ಯ್ಯಾಲ್ ಸ್ವತ್ತನ್ನು ನಾನಾಗಲಿ ನನ್ನ ಹಿರಿಯರಾಗಲಿ ಆಳಿ ಅನುಭವಿಸಿಕೊಂಡು ಬಂದಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯತ್ತಾರೆ. ಸಾಕ್ಷಿ ಅದರಲ್ಲಿ ಗೇರು, ಮಾವು, ತೆಂಗು, ಹಲಸು ಬೆಳೆದಿರುತ್ತೇನೆ ಎಂದು ನುಡಿಯುತ್ತಾರೆ. ಈಗಲೂ ಸಹ ಬಿ ದಾವಾ ಸ್ವತ್ತು ಸರಕಾರದ ಹೆಸರಲ್ಲೇ ಇರುತ್ತದೆ ಎಂದರೆ ಸಾಕ್ಷಿ ಅದು ನಮ್ಮ ಕುಮ್ಕಿ ಹಕ್ಕಿನ ಆಸ್ತಿ ಎಂದು ನುಡಿಯುತ್ತಾರೆ. ನಮಗೆ ಯಾವುದೇ ಹಕ್ಕು ಇಲ್ಲದೇ ಇದ್ದರೂ ಸಹ 1 ರಿಂದಿದ 3 ಪ್ರತಿವಾದಿ ವಿರುದ್ಧ ಸುಳ್ಳು ಪ್ರಕರಣ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ

ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ